ಬಸವನ ಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಪಶುಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸುವುದು.

2198(3387) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಸವನ ಬಾಗೇವಾಡಿ ತಾಲ್ಲೂಕು, ಉಕ್ಕಲಿ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾಪ ಸರ್ಕಾರಕ್ಕಿದೆಯೆ;

2) ಇದ್ದಲ್ಲಿ, ಉನ್ನತೀಕರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ವಿವರಗಳನ್ನು ನೀಡವುದು.

3) ಈ ಮತಕ್ಷೇತ್ರ ವ್ಯಾಪ್ತಿಯ ಕೃಷ್ಣಾ ಮೇಲ್ದಂಡೆ ಯೋಜನೆಯ ನಿರ್ವಸಿತರಾದವರಿಗೆ, ನಿರ್ಮಿಸಿರುವ ಪುನರ್ವಸತಿ ಪ್ರದೇಶಗಳಲ್ಲಿ ಪಶು ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

4) ಈ ಬಗ್ಗೆ ಕೈಗೊಂಡಿರುವ ಕ್ರಮಗಳಾವುವು? (ವಿವರ ಒದಗಿಸುವುದು)

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಇನ್ನೂ ತೀರ್ಮಾನಿಸಿರುವುದಿಲ್ಲ

2) ಉದ್ಭವಿಸುವುದಿಲ್ಲ

3) ಇಲ್ಲ

4) ಉದ್ಭವಿಸುವುದಿಲ್ಲ.

ಬಸವಸಂಗಮ ಅಭಿವೃದ್ಧಿ ಪ್ರಾಧಿಕಾರದ ರಚನೆ.

2199(3388) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಸಂಗಮ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ರಚಿಸಿದೆಯೇ; ರಚಿಸಿದ್ದಲ್ಲಿ, ಎಂದಿನಿಂದ ಅನುಷ್ಠಾನಗೊಳಿಸಲಾಗಿದೆ;

ಆ) ಇದರ ವ್ಯಾಪ್ತಿಗೆ ಬರುವ ಯೋಜನಾ ಪ್ರದೇಶಗಳಾವುವು; ಯೋಜನೆಯ ರೂಪುರೇಶೆಗಳೇನು?

ಇ) ಈ ಯೋಜನೆಗಾಗಿ ನಿಗಧಿಪಡಿಸಿರುವ ಹಣವೆಷ್ಟು; ಈ ಯೋಜನೆಗೂ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೂ ವ್ಯತ್ಯಾಸವುಂಟೇ?

ಈ) ಈ ಪ್ರಾಧಿಕಾರದಲ್ಲಿ ಬಸವಣ್ಣನವರ ಚರಿತ್ರೆಗೆ ಸಂಬಂಧಪಟ್ಟ ಸಮಕಾಲಿನ ಶರಣರಾದ ವಿಜಾಪುರ ತಾಲ್ಲೂಕು ಕಾಖಂಡಕಿ ಗ್ರಾಮದ ಶರಣಹರಳಯ್ಯನವರ ಹರಳೇಶ್ವರ ದೇವಸ್ಥಾನ ಹಾಗೂ ಶರಣ ಮುಗ್ದ ಸಂಗಯ್ಯನವರ ದೇವಸ್ಥಾನ ಉಪ್ಪಲದಿನ್ನಿ ಮುಂತಾದ ಶರಣ ಸ್ಥಳಗಳನ್ನು ಈ ವ್ಯಾಪ್ತಿಯಲ್ಲಿ ಸೇರ್ಪಡೆಗೊಳಿಸಲು ವಿಚಾರ ಸರ್ಕಾರಕ್ಕಿದೆಯೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :—

ಅ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 1994ಕ್ಕೆ ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಬಸವನ ಬಾಗೇವಾಡಿ ಇಂಗಳೇಶ್ವರ, ಚಿಕ್ಕಸಂಗಮ, ಬಸವ ಕಲ್ಯಾಣ ಕ್ಷೇತ್ರ ಹಾಗೂ ಕೂಡಲ ಸಂಗಮ ಕ್ಷೇತ್ರಗಳ ಅಭಿವೃದ್ಧಿಗೆ ವಿಸ್ತರಿಸಲು ಪರಿಶೀಲಿಸಲಾಗುತ್ತಿದೆ.

ಇ) ನಿಗಧಿಪಡಿಸಿರುವುದಿಲ್ಲ.

ಈ) ಇಲ್ಲ.

ಬಸವನ ಬಾಗೇವಾಡಿ ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿ ಸೇತುವೆ ಕಾಮಗಾರಿ.

2200(3389) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಬಾರ್ಡ್ ಯೋಜನೆಯಡಿಯಲ್ಲಿ ಬಿಜಾಪುರ ಬಸವನ ಬಾಗೇವಾಡಿ ರಸ್ತೆಯ ಡೋಣಿ ನದಿಗೆ ಕಟ್ಟುತ್ತಿರುವ ಸೇತುವೆ ಕಾಮಗಾರಿ ಯಾವ ಹಂತದಲ್ಲಿದೆ;

ಆ) ಸದರಿ ಯೋಜನೆಗಾಗಿ ನಿಗಧಿಪಡಿಸಲಾಗಿದ್ದ ಅಂದಾಜು ಮೊತ್ತವೆಷ್ಟು;

ಇ) ಸೇತುವೆ ಕೆಲಸವನ್ನು ಈ ಹಿಂದೆ ಪ್ರಾರಂಭಿಸಿ ಸ್ಥಗಿತಗೊಳಿಸಿದ್ದು ನಿಜವೇ ಇದಕ್ಕೆ ಕಾರಣಗಳೇನು ಪುನಃ ಸ್ಥಗಿತಗೊಂಡಿರುವ ಕಾಮಗಾರಿ ಕೆಲಸವನ್ನು ಎಂದು ಕೈಗೆತ್ತಿಕೊಳ್ಳಲಾಗುತ್ತಿದೆ; (ವಿವರ ನೀಡುವುದು)

ಈ) ಸೇತುವೆ ನಿರ್ಮಾಣದ ಕಾಮಗಾರಿ ವಿಳಂಬದಿಂದ ಸಾರ್ವಜನಿಕರಿಗಾಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಎಂದು ಸೇತುವೆ ಕೆಲಸವನ್ನು ಪೂರ್ಣಗೊಳಿಸಲಾಗುವುದು;

ಊ) ಮಂಜೂರಾಗಿದ್ದ ಹಣದಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಉಳಿದ ಹಣವೆಷ್ಟು?